ಇಲ್ಲಿ ಸ್ಥಳಾವಕಾಶ ಮಾಡಿಕೊಡಲು ೪-೫ ರೂಂಗಳನ್ನು ಈಗ ಕಟ್ಟಿಸಿದರೆ ಇನ್ನು ಕೆಲವು ದಿನಗಳ ನಂತರ ಹುಡುಗರ ಸಂಖ್ಯೆ ಜಾಸ್ತಿಯಾಗಿ ಮತ್ತೆ ಇದೇ ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಆದ್ದರಿಂದ ಮುಂದೆ ಬರ ಬಹುದಾದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಬಿ.ಡಿ.ಎ. ನವರು ಎಲ್ಲಿ ಸೈಟು ಕೊಡುತ್ತೇವೆಂದು ಹೇಳುತ್ತಿದ್ದಾರೆ ಅಲ್ಲೇ ಶಾಲಾ ಕಟ್ಟಡಗಳನ್ನು ಕಟ್ಟಿಸುವುದರಿಂದ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್ —ಯಾವುದೇ ಒಂದು ಏರಿಯಾದಲ್ಲಿ ಶಾಲಾ ಕಟ್ಟಡವನ್ನು ಕಟ್ಟುವು ದಾದರೂ ಕೂಡ ಆಯಾ ಕ್ಷೇತ್ರದ ಮಕ್ಕಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ. ಆದರೆ ನೀವು ಇಲ್ಲಿರತಕ್ಕ ಎಲ್ಲ ಸ್ಕೂಲ್‌ಗಳನ್ನೂ ಸಾರಕ್ಕಿಗೆ ತೆಗೆದುಕೊಂಡು ಹೋಗಿ ಹಾಕುವುದಾದರೆ ಆದರಿಂದ ಏನು ಪ್ರಯೋಜನವಾಗುತ್ತದೆ ?

ಎರಡನೆಯದಾಗಿ ಹೇಳುವುದಾದರೆ, ತಾಲೂಕುಬೋರ್ಡ್‌ನಿಂದ ಮುನಿಸಿಪಾಲಿಟಿಗಳಿಂದ ವರ್ಗಾಯಿ ಸಲ್ಪಟ್ಟ ಶಾಲಾ ಕಟ್ಟಡಗಳ ಯಜಮಾನಿಕೆಯನ್ನು ಏತಕ್ಕೆ ಆಗಲೀ ವರ್ಗಾಯಿಸಿಕೊಳ್ಳಲಿಲ್ಲ ? ಆಗ ಇವು ಗಳ ಯಜಮಾನಿಕೆಯನ್ನು ವರ್ಗಾಯಿಸಿಕೊಳ್ಳದೇ ಹೋಗಿರುವುದರಿಂದ ಈ ಶಾಲಾ ಕಟ್ಟಡಗಳು ಸರಕಾಲಕ್ಕೆ ರಿಪೇರಿ ಆಗದೆ ಕುಸಿದುಬೀಳುವ ಮಟ್ಟಕ್ಕೆ ಬಂದಿವೆ. ಆದ್ದರಿಂದ ಇವುಗಳ ಖಾತೆಯನ್ನು ಲೋಕೋಪ ಯೋಗಿ ಇಲಾಖೆಯವರಿಗೆ ವರ್ಗಾಯಿಸಿಕೊಡಬೇಕೋ ಅಥವಾ ಬೇರೆಯವರಿಗೆ ವರ್ಗಾಯಿಸಿ ಕೊಡ ಬೇಕೋ ಎಂಬುದನ್ನು ಪರಿಶೀಲಿಸಿ ಆದಷ್ಟುಬೇಗ ಈ ಕೆಲಸಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಜಿ.ಬಿ. ಶಂಕರರಾವ್.—ಈ ಕಟ್ಟಡಗಳ ದುರಸ್ತಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡುವುದರಲ್ಲಿ ನನ್ನ ಅಭ್ಯಾಂತರವೇನೂ ಇಲ್ಲ. ಆದರೆ ಇದಕ್ಕೆ ಅವಶ್ಯಕವಾಗಿ ಬೇಕಾಗಿರುವ ಹಣ ನಮ್ಮಲ್ಲಿಲ್ಲ. ಶಾಲೆಗಳನ್ನು ವ್ಯವಸ್ಥಿತವಾಗಿ ನಡೆಸಲು ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದರಿಂದ ನಾವು ಬೇರೆ ಕಡೆ ಹೋಗಬೇಕಾಗಿದೆ. ಒಂದು ವೇಳೆ ಖಾಲಿ ಜಾಗ ಎಲ್ಲಿಯಾದರೂ ಇದ್ದರೆ ಅದನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇದಕ್ಕೆಲ್ಲ ಎಷ್ಟು ಕಾಲಾವಕಾಶ ಬೇಕಾಗುತ್ತದೆಂಬುದು ತಮಗೇ ಗೊತ್ತಿದೆ. ಒಟ್ಟಿನಲ್ಲಿ ಈ ವಿಚಾರವನ್ನು ಇವತ್ತು ತಾವು, ನನ್ನ ಗಮನಕ್ಕೆ ತಂದಿದ್ದೀರಿ. ಈಗ ಹಾಲಿ ಇರತಕ್ಕ ಕಟ್ಟಡಗಳನ್ನು ರಿಪೇರಿ ಮಾಡಿಸುವುದಕ್ಕೆ ಹಾಗೂ ಹೊಸದಾಗಿ ಕಟ್ಟಡಗಳನ್ನು ಕಟ್ಟಿಸು ವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀ ಎಂ. ಚಂದ್ರಶೇಖರ್.—ಕೆಲವು ಪ್ರೈವೇಟ್ ಬಿಲ್ಡಿಂಗ್‌ಗಳಲ್ಲಿ ಪ್ರೈವೇಟ್ ಸ್ಕೂಲುಗಳು ನಡೆಯುತ್ತಿವೆ. ಆ ಶಾಲೆಗಳಲ್ಲಿಯೇ ಸರ್ಕಾರಿ ಶಾಲೆಗಳನ್ನು ನಡೆಸುವ ಪ್ರಮೇಯ ಬಂದಿದೆ. ನಿಮ್ಮ ಇಲಾಖೆಯನ್ನು ವಿಚಾರಿಸಿ ನೋಡಿ ಹಿಂದಿನ ಮಂತ್ರಿಗಳಿಗೂ ಕೂಡ ಈ ವಿಷಯವನ್ನು ಗಮನಕ್ಕೆ ತರ ಲಾಗಿತ್ತು. ವಿದ್ಯಾಭ್ಯಾಸ ಇಲಾಖೆಯವರು ಶಾಲಾಕಟ್ಟಡಗಳನ್ನು ರಿಪೇರಿ ಮಾಡಿಸುತ್ತಿಲ್ಲ. ಆದ್ದರಿಂದ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಬಿ. ಶಂಕರ್ ರಾವ್.—ಮಾನ್ಯ ಅಧಕ್ಷರೆ ಇದರ ಮೂಲ ಪ್ರಶ್ನೆ ಕಟ್ಟಡದ ಬಗ್ಗೆ ಆದರೆ ಆದರಲ್ಲಿ ಕೆಲವು ಖಾಸಗಿಯವರ ಕಟ್ಟಡಗಳಲ್ಲಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ ಆ ವಿಚಾರದಲ್ಲಿ ಉತ್ತರ ಕೊಟ್ಟಿದ್ದೇನೆ. ಇನ್ನು ಯಾವಯಾವ ಸ್ಕೂಲುಗಳಿಗೆ ತೊಂದರೆ ಇದೆ ಎಂಬುದೂ ಬೇರೆ ವಿಚಾರ. ಅದಕ್ಕೆ ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ತಾಲ್ಲೂಕುಬೋರ್ಡ್ ಸ್ಕೂಲುಗಳನ್ನು ಕಾಮಗಾರಿ ಇಲಾಖೆಗೆ ಹಸ್ತಾಂತರ ಮಾಡಲಿಕ್ಕೆ ಏನು ತೊಂದರೆಯಿಲ್ಲ ಮಾಡುತ್ತೇವೆ.

Production of Sugar

(359) SRI A.B. BEDAGE (Sadalga).—Will the Chief Minister be pleassed to state.—

(a) the names of Sugar factories in the State where r covery of percentage of Sugar was the highest during the year 1979-80 (percentage-wise information may please be furnished);

(b) the quantity of extra sugar manufactured with this high recovery of sugar?

SRI M. VEERAPPA MOILY (Minister For Finance and Planning [On behalf of SRI R. GUNDU RAO (Chief Minister)]

(a) Following three Sugar Factories have yielded high percentage of Sugar during the year 1979-80.

(1) Hiranyakeshi Co-operative Sugar Factory, Sankeshwara 10.92%

(2) Malaprabha Co-operative Sugar Factory, M.K. Hubli 10.90%

(3) Ugar Sugar Works, Ugarkurd 10.75%

(b) About 2860 Quintals.

ಶ್ರೀ ಎ. ಬಿ. ಬೆಡಗೆ.—ಅಧ್ಯಕ್ಷರೆ, ಸಕ್ಕರೆ ಉತ್ಪಾದನದ ಬಗ್ಗೆ ಏನು ಪರ್ಸ್ಂಟೇಜ್ ಕೊಟ್ಟಿದ್ದಾರೆ ಅದು ಕ್ವಿಂಟಾಲ್‌ಗಳಲ್ಲಿದೆಯೇ ಅಥವಾ ಟನ್‌ಗಳಲ್ಲಿದೆಯೇ ಅದನ್ನು ತಿಳಿಸುತ್ತಾರಾ ? ನಾನು ಈ ಮೂರು ಕಾರ್ಖಾನೆಗಳ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಿಕ್ಕೆ ಬಯಸುತ್ತೇನೆ ?

ಶ್ರೀ ಎಂ. ವೀರಪ್ಪಮೊಯಿಲಿ.—೨೨ ಕಾರ್ಖಾನೆಗಳ ಪರ್ಸ್ಂಟೇಜ್ ನನ್ನ ಹತ್ತಿರ ಇದೆ ಬೇಕಾದರೆ ಹೇಳುತ್ತೇನೆ.

ಶ್ರೀ ಎ.ಬಿ. ಬೆಡಗೆ.—ಅಧ್ಯಕ್ಷರೆ, ಹಿರಣ್ಯಾಕ್ಷಿ ಸಕ್ಕರೆ ಕಾರ್ಖಾನೆ. ಉಗಾರ್ ಸಕ್ಕರೆ ಕಾರ್ಖಾನೆ ಮತ್ತು ಮಲಪ್ರಬಾ ಈ ಕಾರ್ಖಾನೆಗಳ ವಿವರಗಳನ್ನು ಕ್ವಿಂಟಾಲ್‌ಗಳಲ್ಲಿ ಪ್ರತ್ಯೇಕವಾಗಿ ಕೊಡುತ್ತೀರಾ?

SRI. M. VEERAPPA MOILY.—Hiranyakeshi Co-operative Sugar Factory-total cane crushed 3,07,866 Metrie Tonnes ; total sugar produced 33.611; recoveries 10.92% Malaprabha Co-operative Sugar Factory total cane crushed 1,70,000 ton; total sugar produced 18,838 ton, Ugar Sugar Works-total cane crushed 3,46,783; total sugar produced 37,290.

ಶ್ರೀ ಎ.ಬಿ. ಬೆಡಗೆ.—ಅಧ್ಯಕ್ಷರೆ, ನನ್ನ (ಆ) ಪ್ರಶ್ನೆಗೆ ಹೆಚ್ಚಿಗೆ ಉತ್ಪಾದನೆಯಾಗಿದೆ ಎಂದು ಕೊಟ್ಟಿದ್ದಾರೆ. ಆದರೆ ಅದು ಕ್ವಿಂಟಾಲ್‌ನಲ್ಲಿದೆಯೇ, ಟನ್ ಲೆಕ್ಕದಲ್ಲಿದೆಯೋ ನನಗೆ ಗೊತ್ತಾಗುತ್ತಿಲ್ಲ. ಆದರಲ್ಲಿ ೨ ಸಾವಿರ ಕ್ವಿಂಟಾಲ್‌ಗಳಲ್ಲಿ ಇದ್ದರೆ ಅದನ್ನು ತಿಳಿಸುತ್ತಾರಾ?

ಶ್ರೀ ಎಂ ವೀರಪ್ಪಮೊಯಿಲಿ.—ಅದು ಕ್ವಿಂಟಾಲ್‌ಗಳಲ್ಲಿ ಇದೆ.

ಶ್ರೀ ಎ.ಬಿ. ಬೆಡಗೆ.—ಹಾಗಾದರೆ ೧೦.೯೨, ೧೦.೯೦ ಎಂದು ಪರ್ಸ್ಂಟೇಜ್ ಕೊಟ್ಟಿದ್ದಾರೆ ಇದು ಹೇಗೆ ಕ್ವಿಂಟಾಲ್ ಆಗುತ್ತದೆ ನನಗೆ ಅರ್ಥವಾಗುತ್ತಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಈಗಾಗಲೇ ಹೇಳಿದ್ದೇನೆ ಕ್ವಿಂಟಾಲ್‌ನಲ್ಲಿ ಪರ್ಸ್ಂಟೇಜ್ ಇದೆ ಎಂದು.

ಶ್ರೀ ಎ.ಬಿ. ಬೆಡಗೆ.—ನನ್ನ ಪ್ರಶ್ನೆಗೆ ಕೊನೆಯಲ್ಲಿ ಉತ್ತರ ಕೊಟ್ಟಿದ್ದಾರೆ ಅದು ಟನ್‌ನಲ್ಲಿ ಮಾತ್ರ ಇರಲಿಕ್ಕೆ ಸಾಧ್ಯ. ಇದು ಚೀಲಗಳಲ್ಲಿ ೨ ಸಾವಿರ ಎಂದು ಏನು ಇದೆ ಅದು ಪ್ರತ್ಯೇಕ ಉತ್ಪಾದನೆ ಮಾಡಿದ್ದು ಆದ್ದರಿಂದ ಮತ್ತೊಂದು ಸಾರಿ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ ಬೆಳಗಾಂನ ಮಾನ್ಯ ಸಯನಕ್‌ರವರಂ ಹೇಳುವುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಆದರೆ ಇವರಂ ಹೇಳಿದ್ದು ನನಗೆ ಅರ್ಥವಾಗಿಲ್ಲ. ಕೆಲವೊಮ್ಮೆ ಕ್ವಿಂಟಾಲ್ಸ್ ಅಥವಾ ಟನ್ ಬೇಕಾದರೂ ಮಾಡಲಿಕ್ಕೆ ಬರುತ್ತದೆ. ಇಲ್ಲಿ ಒಟ್ಟು ಕ್ವಿಂಟಾಲ್‌ನಲ್ಲಿ ಕೊಟ್ಟಿದೆ.

ಶ್ರೀ ಎ. ಬಿ. ಬೆಡಗೆ.—ಈಗಾಗಲೇ ಉತ್ಪಾದನೆ ಹೋದವರ್ಷದ್ದು ಹೆಚ್ಚು ಕೊಟ್ಟಿದ್ದಾರೆ ಈ ವರ್ಷದ್ದು ಏನು ಎಂದು ತಿಳಿಯುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಹೇಳಿರುವುದು ಎಕ್ಸ್‌ಟ್ರಾ ಶುಗರ್ ಪ್ರೊಡ್ಯೂಸ್ಡ್ ಆದಕ್ಕೆ ಟೋಟಲ್ ಪ್ರೊಡಕ್ಷನ್ ಕೊಟ್ಟಿದ್ದೇವೆ.

Improper treatment of Harijan Officials in Public Works Department

120. SRI R.S. NADONI (Raibag).—Will the Chief Minister be pleased to state:—

(a) whether it has come to their notice that the Engineers in Public Works and Irrigation Departments behave rudely with their subordinate Harijan staff;

(b) if so, action taken by them to prevent the same?

SRI M. VEERAPPA MOILY (Minister for Finance and Planning) on behalf of SRI R. GUNDU RAO (Chief Minister).—

(a) No.

(b) This question does not arise.

ಶ್ರೀ ಆರ್.ಎಸ್. ನಡೋಣಿ.—ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಹರಿಜನ ಗಿರಿಜನರನ್ನು ಕಾವುಗಾರಿ ಕೆಲಸಕ್ಕೆಂದು ತೆಗೆದುಕೊಂಡಿದ್ದು ಸರಿಯಷ್ಟೆ. ಇತ್ತೀಚೆಗೆ ಶ್ರೀ ಚಿಕ್ಕೋಡಿ ಎಂಬ ಹೆಸರಿರುವ ಎಕ್ಸಿಕ್ಯೂಟೀವ್ ಎಂಜನೀಯರ್ ಬಂದಿದ್ದಾರೆ. ಅವರನ್ನು ಬಂದ ಮೇಲೆ ಜಾತಿಯ ಕೀಳು ಭಾವನೆಯಿಂದ ಈ ಹರಿಜನರನ್ನು ಕೆಲಸದಿಂದ ಏಕಾಏಕಿ ತೆಗೆದುಹಾಕಿದ್ದಾರೆ ಮತ್ತೆ ಹರಿಜನರನ್ನು ಕಂಡರೆ ಬಹಳ ಕೀಳು ಭಾವನೆಯಿಂದ ನೋಡುತ್ತಿದ್ದಾರೆ. ಅದಕ್ಕೆ ಸರ್ಕಾರ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸಾರ್ವಜನಿಕವಾಗಿದೆ. ಆದ್ದರಿಂದ ಅವರು ಸ್ಪೆಸಿಫಿಕ್ ಆಗಿ ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡಿ ಆ ರೀತಿ ಆಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಆರ್.ಎಸ್. ನಡೋಣಿ.—ಮೊದಲು ಬೇರೆ ಇಂಜನೀಯರ್ ಇದ್ದಾಗ ತೆಗೆದುಕೊಂಡ ಈ ಹರಿಜನರನ್ನು ಮಾನ್ಯ ಚಿಕ್ಕೋಡಿಯವರು ಬಂದಮೇಲೆ ತೆಗೆದುಹಾಕಿದ್ದಾರೆ. ಇನ್ನು ಬೇರೆ ಯಾವ ತಾಲ್ಲೂಕಿನಲ್ಲಿ ಎಲ್ಲಿಯೂ ತೆಗೆದುಹಾಕಿಲ್ಲ. ಆದ್ದರಿಂದ ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರಪ್ಪ ಮೊಯಿಲಿ.—ಈಗ ಮಾನ್ಯ ಸದಸ್ಯರು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿ ಆದರಲ್ಲಿ ಏನಾದರೂ ತೊಂದರೆ ಯಾಗಿದೆಯೇ ಅನ್ಯಾಯವಾಗಿದೆಯೇ ಎಂಬುದನ್ನು ನೋಡಿ ಅಲ್ಲಿ ಯಾವುದೇ ಭೇದಭಾವನೆಗಳು ಆಗದ ಹಾಗೆ ಸರ್ಕಾರ ಖಂಡಿತವಾಗಿಯೂ ನೋಡಿಕೊಳ್ಳುತ್ತದೆ.

Slums at 'Kasturba Nagar' in Bangalore City

447. SMT. S. PRAMILA (Chamrajpet)—Will the Minister for Housing & Urban Development be pleased to state:—

(a) whether it is a fact that over right slums are coming up at Kasturba Nagar, Bangalore City.

(b) if so, the action taken to prevent such occurrences.